ಅದಕ್ಕೆ ಈ ಸಾರಿ ನಿಮಗೊಂದು ಪನಿಷ್ಮೆಂಟ್...' ಎಂದವಳೇ ಕುರ್ಚಿಯಿಂದ ಎದ್ದು ನಿಂತವಳೇ ತನ್ನ ಬಲಗೈಯನ್ನು ಮೇಲೆ ಕೆಳಗೆ ಆಡಿಸುತ್ತಾ, ತೋರುಬೆರಳಿನಿಂದ ನಿರ್ದಿಷ್ಟವಾಗಿ ಅವನತ್ತ ಗುರಿ ಮಾಡುತ್ತಾ, 'ಅಂಕಲ್ ನನ್ನನ್ನು ಆಪಲ್ ಅಂತ ಕರೀರಿ' ಎಂದು ಮುಗ್ಧವಾಗಿ ನಕ್ಕು ಬಿಟ್ಟಳು.

ಶಿಸ್ತಾಗಿ ಅವನೆದುರು ನಿಂತೇ ಇದ್ದ ನವೀನ್ ನಗುವನ್ನು ತಡೆಯಲು ಎಷ್ಟು ಬಿಗಿಯಾಗಿ ಅವಡುಗಚ್ಚಿದನೆಂದರೆ ಅವನಿಗೆ ಕೆಳ ಹೊಟ್ಟೆಯಲ್ಲಿ ಕಚಗುಳಿಯಾದಂತೆ ಅನಿಸಿ ಕೊನೆಗೂ ತಡೆಯಲು ಸಾಧ್ಯವಾಗದೆ ಗಹಗಹಿಸಿ ನಕ್ಕು ಮತ್ತೆ ಗಪ್ಪೆಂದು ಬಾಯಿ ಮುಚ್ಚಿ ಬಿಟ್ಟ. ಮತ್ತು ಸಾಹೇಬರು ಮುಕ್ತವಾಗಿ ನಗುವುದನ್ನು ಕಂಡ. ಯಾವ ಅಂತಸ್ತು, ಯಾವ ಕೋಡ್ ಆಫ್ ಕಂಡಕ್ಟ್ ಕೂಡಾ ಸಾಹೇಬರನ್ನು ಆವರಿಸಲು ಸಾಧ್ಯವಿರಲಿಲ್ಲ. 'ಸಾಹೇಬರು ಅಟ್ ಲೀಸ್ಟ್ ಹೀಗೆ ದಿನಕ್ಕೆ ಒಂದು ಸಾರಿಯಾದರೂ ನಗಬೇಕಪ್ಪ' ಅವನು ತನಗೆ ತಾನೇ ಹೇಳಿಕೊಂಡ. ಮತ್ತೆ 'ನೀನು ಕೂಡಾ ಸ್ವಲ್ಪ ಮನಃಪೂರ್ತಿ ನಗೋದನ್ನು ಕಲಿತುಕೊಳ್ಳಯ್ಯಾ' ಎಂದು ತನ್ನ ಅಂತರಂಗಕ್ಕೆ ಸಲಹೆಯನ್ನು ಕೂಡಾ ನೀಡಿಕೊಂಡ.



'ಆಪಲ್ ಅಂತ ಯಾಕೆ?'

'ಆ ಹೆಸರನ್ನು ನೀವು ಮರೆಯಕ್ಕಾಗಲ್ಲವಲ್ಲ ಅಂಕಲ್?' ಅದನ್ನು ಅವಳು ಹೇಗೆ ಹೇಳಿದಳೆಂದರೆ ಮತ್ತೆ ನೋಡಿದರೆ ದೊಡ್ಡ ಜಡ್ಜ್ ಅಂತೆ ಇವರಿಗೆ ಯಾಕೆ ಇಷ್ಟೊಂದು ಬುದ್ಧಿ ಕಡಿಮೆ ಇದೆ ಎಂದು ಸೋಜಿಗ ಪಟ್ಟುಕೊಳ್ಳುವಂತೆ ನುಡಿದಳು. ಅವಳ ಕಣ್ಣು, ಕೈ, ಬಾಯಿ ಎಲ್ಲವೂ ಒಟ್ಟೊಟ್ಟಿಗೆ ಮಾತನಾಡುತ್ತಿದ್ದವು. ವಿಚಿತ್ರ ಸಮನ್ವಯದ ವಾತಾವರಣ.

ಯಾವುದೋ ಅನುಭೂತಿಯಲ್ಲಿ ತೇಲಿ ಹೋದಂತೆ ಅವನ ಮೈಮನದ ಗಂಟುಗಳೆಲ್ಲಾ ಸಡಿಲವಾದಂತೆನಿಸಿ ಅವನು ಹಗುರವಾದ. ಮಕ್ಕಳ ಜೊತೆಯಲ್ಲಿ ಮಕ್ಕಳಾಗಿ ಬಿಟ್ಟರೆ ಈ ಎಲ್ಲಾ ಗೊಂದಲಗಳು ಕರಗಿ ಹೋಗುತ್ತವೆ ಎಂದು ಸರಳೀಕರಿಸಿದ. ಆಗ ಅವನಿಗೆ ನೆನಪಾದವನೇ ದೀಪಾಳ ತಂದೆಯಾದ ಜಯಶಂಕರ. ಪತ್ನಿಯ ಕೊಲೆಯ ಬಗ್ಗೆ ಪೊಲೀಸರು ದಾಖಲಿಸಿದ ಪ್ರಕರಣ ಅವನ ಕೋರ್ಟಿಗೆ ವರ್ಗಾಯಿಸಲ್ಪಟ್ಟು ವಿಚಾರಣೆಯು ನಡೆಯುತ್ತಿತ್ತು. ಜಯಶಂಕರನ ಜಾಮೀನು